## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 927/2025

ಫ್ರಾಸಾ – 6

ಚಾಸಾ – 6

**ಸಾಕ್ಷಿಯು ದಿಃ 18.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಶಿವಮಲ್ಲಪ್ಪ |
| ತಂದೆಯ ಹೆಸರು | : | ಕರಿಯಪ್ಪ |
| ವಯಸ್ಸು | : | 50 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಹೊನ್ನೆಗೌಡನ ಹಳ್ಳಿ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಮತ್ತು 5 ಗೊತ್ತು. ಸಾಕ್ಷಿಯು ನಿಪಿ 2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 2(ಬಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ಯಾವಾಗ ಎಲ್ಲಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-</u>**

ದಿಃ 16.01.2021 ರಂದು ಚಾಸಾ 1 ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು ನನ್ನ ಸಮಕ್ಷಮ ಪೊಲೀಸರು ನಿಪಿ 2 ರಂತೆ ಪಂಚನಾಮೆ ಜರುಗಿಸಿ ಸ್ಥಳದಲ್ಲಿ ಒಂದು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರ ವಿಚಾರಗಳು ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ